# UNIVERSITY OF MYSORE

## PROCEEDING OF THE 2$^{nd}$ ORDINARY ACADEMIC COUNCIL METTING HELD ON 22-10-2024

ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ–3/113/2024–2025
ಅಡಕ: ನಡವಳಿಗಳು(1–8)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ದಿನಾಂಕ 04–11–2024

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 22–10–2024ರಂದು ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:22–10–2024ರಂದು ಬೆಳಗ್ಗೆ 11–00 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಿದೆ. ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು–570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ. ಸದರಿ ನಡವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ.

ತಮ್ಮ ನಂಬುಗೆಯ

Lingaraju 04/11/24

ಉಪ ಕುಲಸಚಿವ(ಪ್ರಾಧಿಕಾರ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು, (ICD) ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು - ಶಿಕ್ಷಣ ಮಂಡಳಿ ಸಭೆಯ ನಡವಳಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಳವಡಿಸಲು ಕ್ರಮವಹಿಸುವುದು.
8. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

## ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ: 22-10-2024 ರಂದು ಪೂರ್ವಾಹ್ನ 11.00 ಗಂಟೆಗೆ ನಡೆದ ಶಿಕ್ಷಣ ಮಂಡಳ ಎರಡನೇ ಸಾಮಾನ್ಯ ಸಭೆಯ ನಡಾವಳಿ.**

<u>ಉಪಸ್ಥಿತರು:</u>

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ – ಸದಸ್ಯರು
4. ಡಾ. ಮುಜೀದ ಬಾನು – ಸದಸ್ಯರು
5. ಡಾ. ಅಂತೋಣಿ ಪೌಲ್ ರಾಜ್.ಸಿ – ಸದಸ್ಯರು
6. ಶ್ರೀಮತಿ ಕೆ.ಎಂ. ಪದ್ಮವತಿ – ಸದಸ್ಯರು
7. ಪ್ರೊ. ಬಿ. ಮಹದೇವಪ್ಪ – ಸದಸ್ಯರು
8. ಪ್ರೊ. ಎಂ.ಜಿ. ಮಂಜುನಾಥ – ಸದಸ್ಯರು
9. ಪ್ರೊ. ಡಿ. ಸೊನರ್ ನಂದಪ್ಪ – ಸದಸ್ಯರು
10. ಪ್ರೊ. ಎಸ್.ಜೆ. ಮಂಜುನಾಥ್ – ಸದಸ್ಯರು
11. ಪ್ರೊ. ಎಂ. ಸುರೇಶ್ ಬೆಂಜಮಿನ್ – ಸದಸ್ಯರು
12. ಪ್ರೊ. ಸಿ. ವೆಂಕಟೇಶ್, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ವಿಭಾಗ – ಸದಸ್ಯರು
13. ಪ್ರೊ. ಎಂ.ಎ. ಶ್ರೀಧರ್ – ಸದಸ್ಯರು
14. ಪ್ರೊ. ಆಯಿಷಾ ಎಂ.ಷರಿಫ್ – ಸದಸ್ಯರು
15. ಪ್ರೊ. ಕೆ. ಕೆಂಪರಾಜು – ಸದಸ್ಯರು
16. ಪ್ರೊ. ಡಿ. ಆನಂದ್, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳ – ಸದಸ್ಯರು
17. ಡಾ. ಸರಸ್ವತಿ ಪಿ., ಗ್ರಂಥಪಾಲಕರು – ಸದಸ್ಯರು
18. ಡಾ. ಸುಷ್ಮಾ. ಎಸ್.ಎನ್, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು (ಪ್ರಭಾರ) – ಸದಸ್ಯರು
19. ಪ್ರೊ. ಎನ್. ನಾಗರಾಜ, ಕುಲಸಚಿವ (ಪರೀಕ್ಷಾಂಗ) ನಿರ್ದೇಶಕರು, ಪಿ.ಎಂ.ಇ.ಬಿ. (ಪ್ರಭಾರ) – ಸದಸ್ಯರು
20. ಶ್ರೀಮತಿ ರೇಖಾ ಕೆ.ಎಸ್, ಕೆ.ಎಸ್.ಎ.ಎಸ್., ಹಣಕಾಸು ಅಧಿಕಾರಿ – ಸದಸ್ಯರು
21. ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., ಕುಲಸಚಿವರು – ಸದಸ್ಯ ಕಾರ್ಯದರ್ಶಿ

<u>ಅನುಪಸ್ಥಿತರು</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
2. ಶ್ರೀ ದರ್ಶನ್ ಧ್ರುವನಾರಾಯಣ್, ವಿಧಾನಸಭಾ ಸದಸ್ಯರು
3. ಶ್ರೀ ಸಿ.ಎನ್. ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು
4. ಶ್ರೀ ಎಂ.ಪಿ.ಕುಶಾಲಪ್ಪ, ವಿಧಾನ ಪರಿಷತ್ ಸದಸ್ಯರು
5. ಡಾ. ಗಣೇಶ ಕೆ.
6. ಡಾ. ಪ್ರಿಯ ಸಿ.ಜೆ.
7. ಪ್ರೊ. ಕೆ. ಸದಾಶಿವ

ಮೊದಲಿಗೆ ಕುಲಸಚಿವರು ಸಭೆಯ ಅಧ್ಯಕ್ಷರಾಗಿರುವ ಮಾನ್ಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರನ್ನು, ಉಪಸ್ಥಿತರಾಗಿರುವ ಗೌರವಾನ್ವಿತ ಎಲ್ಲಾ ನಿಕಾಯದ

ಡೀನರುಗಳು, ಅಧಿಕಾರಿವರ್ಗದವರು, ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸ್ವಾಗತಿಸಿದರು.

ನಂತರ, ಹೊಸದಾಗಿ ಕುಲಸಚಿವ (ಪರೀಕ್ಷಾಂಗ)ರಾಗಿ ನೇಮಕಗೊಂಡಿರುವ ಪ್ರೊ. ಎನ್. ನಾಗರಾಜ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಡಾ. ಕೆ. ಕೆಂಪರಾಜು, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

ಹಾಗೂ

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಡಾ. ಬಸಪ್ಪ, ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಡಾ. ನಾಗರಾಜ ನಾಯ್ಕ್, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಶ್ರೀ ಎಸ್.ಹೆಚ್. ಗಂಗೇಗೌಡ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ, ಹಾಸನ.
4. ಡಾ. ಜಯಶಂಕರ್ .ಎಸ್, ಪ್ರಾಂಶುಪಾಲರು, ಸಂತ ಜೋಸಫರ ಶಿಕ್ಷಣ ಕಾಲೇಜು, ಮಂಡ್ಯ.
5. ಡಾ. ಸೌಮ್ಯ ಈರಪ್ಪ, ಪ್ರಾಂಶುಪಾಲರು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಮೈಸೂರು.

ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I.I | ದಿನಾಂಕ: 28-06-2024ರಂದು ಜರುಗಿದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 28-06-2024ರಂದು ಜರುಗಿದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿ ವಿಷಯ ಸಂಖ್ಯೆ: II.8ರಲ್ಲಿ ನಮೂದಿಸಿರುವ ಈ ಕೆಳಕಂಡ ತಿದ್ದುಪಡಿಯೊಂದಿಗೆ ನಡವಳಿಯನ್ನು ದೃಢೀಕರಿಸಲಾಯಿತು.** |

| | ಪ್ರಸುತ್ತ ನಡವಳಿಯಲ್ಲಿ ದಾಖಲಿಸಿರುವುದು | ತಿದ್ದುಪಡಿಯಾಗಬೇಕಾಗಿರುವುದು |
|---|---|---|
| ದತ್ತಿಯ ಹೆಸರು | **"Prof. S. Sathyanarayan and Prof. P.N. Satish Gold Medal"** | "ಪ್ರೊ. ಗೋಪಾಲ ಮರಾಠೆ ಕೆ. ಚಿನ್ನದ ಪದಕ" |
| ಷರತ್ತುಗಳು | This Gold Medal should be awarded to the Candidate who has passed M.Sc. Geology or M.Sc. Applied Geology Examination in Highest Scorer in Sedimentary Petrology & Geotectonics Paper of 3rd Sem. M.Sc. Applied Geology **OR** Highest Scorer in Sedimentary Petrology and Structural Geology Paper of 1st Sem. M.Sc. Geology in First Attempt and Securing Highest Marks. | The Gold Medal should be awarded to the candidate who has secured highest marks in. M.Sc. in Molecular Examination in Molecular Biology, Manasagangotri, University of Mysore, subject/paper in first attempt and securing highest Marks. |

| | | |
|---|---|---|
| ಪಾವತಿಸಿರುವ ಮೊತ್ತ | Rs.1,00,000/- | Rs.1,00,000/- |
| ದತ್ತಿಯ ಹೆಸರು | **"Prof. C. Srikantappa and Late Prof. A.S. Janardhan Gold Medal"** | **"ಪ್ರೊಫೆಸರ್ ದೊಡ್ಡೇರಿ ಅಶ್ವತ್ಥನಾರಾಯಣರಾವ್ ಶಂಕರ್ ಚಿನ್ನದ ಪದಕ"** |
| ಷರತ್ತುಗಳು | This Gold Medal should be awarded to the Candidate who has passed M.Sc. Geology or M.Sc. Applied Geology Examination in Highest Scorer in Advanced Igneous Petrology Paper of 3rd Sem. of M.Sc. Applied Geology **OR** Highest Scorer in Igneous & Metamorphic Petrology Paper of 2nd Sem. of M.Sc. Geology in First Attempt and Securing Highest Marks. | The Gold Medal should be awarded to the candidate who has Passed in the First Attempt- M.A. in English Examination subject/paper in first attempt and securing highest Marks. |
| ಪಾವತಿಸಿರುವ ಮೊತ್ತ | Rs.1,00,000/- | **Rs.1,05,000/-** |
| ದತ್ತಿಯ ಹೆಸರು | **"Smt. Sharadamma and Sri. K.G.Narasimha Shastry Gold Medal"** | **"Prof. Dr. C. Basavaraju's Gold Medal"** |
| ಷರತ್ತುಗಳು | This Gold Medal should be awarded to the Candidate who has passed M.Sc. Geology in First Attempt and Securing Highest Marks in All Sem. | **The Gold Medal should be awarded to the candidate who has Passed as the topper in L.L.M.- DOS in Law Examination in Constitution Law & Business Law, subject/paper in first attempt and securing highest Marks.** |
| ಪಾವತಿಸಿರುವ ಮೊತ್ತ | **Rs.1,00,000/-** | **Rs.1,05,000/-** |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (X) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ಮೂರು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಮೂರು ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. | |

| | |
|---|---|
| II.1 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಹಿರಿಯ ಪ್ರಾಧ್ಯಾಪಕಿ ಅಸ್ಮಾ ಉರೂಜ್ ನಗದು ಬಹುಮಾನ" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 31 (2) **(X)** ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು **M.Sc in Food Science and Nutrition** ಪರೀಕ್ಷೆಯಲ್ಲಿ **Nutritional Biochemistry** ವಿಷಯದಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿದ್ದು, ಅತಿ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ "ಹಿರಿಯ ಪ್ರಾಧ್ಯಾಪಕಿ ಅಸ್ಮಾ |

| | |
|---|---|
| | ಉರೂಜ್ ನಗದು ಬಹುಮಾನ" ದತ್ತಿ ಸ್ಥಾಪನೆ ಮಾಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| II.2 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "JAYASHREERAM GOLD MEDAL" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 31 (2) **(X)** ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು **M.Sc., in Geographical Information System** ವಿಷಯದಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿ, ಅತಿ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದ) ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ **"JAYASHREERAM GOLD MEDAL"** ದತ್ತಿ ಸ್ಥಾಪನೆ ಮಾಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| II.3 | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿರುವ ಬಿ.ಕಾಂ. ಕೋರ್ಸ್‌ನ ಪ್ರಥಮ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯಾಮಿತಿಯನ್ನು 690 ರಿಂದ 1100ಕ್ಕೆ ಹೆಚ್ಚಿಸಿರುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಸಂಯೋಜನೆ ಪಡೆದಿರುವ ಯಾವುದೇ ಕಾಲೇಜಿನ ಪ್ರವೇಶಾತಿಯಲ್ಲಿ ಒಂದೇ ಬಾರಿಗೆ 400-500 ಕ್ಕೆ ವಿದ್ಯಾರ್ಥಿಗಳ ಸಂಖ್ಯಾಮಿತಿಯನ್ನು ಹೆಚ್ಚಿಸುವುದರಿಂದ ಅಷ್ಟು ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಷ್ಟವಾಗುತ್ತದೆ. ಸರ್ಕಾರಿ ಕಾಲೇಜಾದರೂ 100-150ಕ್ಕೆ ಸೀಮಿತಗೊಳಿಸುವುದು ಸೂಕ್ತ ಹಾಗೂ ಎಲ್ಲಾ ಕಾಲೇಜುಗಳಿಗೂ ನಿಗದಿಗೊಳಿಸಿರುವ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಯಲ್ಲಿ ಶೇ.20 ರಷ್ಟು ಮಾತ್ರ ಹೆಚ್ಚುವರಿಯಾಗಿ ಪ್ರವೇಶಾತಿ ಮಾಡಿಕೊಳ್ಳಲು ಆದೇಶ ನೀಡುವುದು. ಸರ್ಕಾರಿ ಕಾಲೇಜುಗಳಿಗೆ ಅಧ್ಯಾಪಕರುಗಳು ಹಾಗೂ ಬೋಧನಾ ಕೊಠಡಿಗಳಿಗನುಗುಣವಾಗಿ ಶೇ.10-15ರಷ್ಟು ಹೆಚ್ಚುವರಿಯಾಗಿ ಪ್ರವೇಶಾತಿ ಮಾಡಿಕೊಳ್ಳಲು ಆದೇಶ ನೀಡುವುದು. ಸಂಯೋಜನೆ ಮತ್ತು ಪ್ರವೇಶಾತಿ ಪ್ರಾರಂಭವಾಗುವ ಅವಧಿಯಲ್ಲಿಯೇ ಈ ನಿಯಮವನ್ನು ಪಾಲನೆ ಮಾಡುವುದು ಸೂಕ್ತವೆಂದು ಸಭೆಯ ಗಮನಕ್ಕೆ ತಂದರು.<br><br>ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರೊ. ಎ.ಎಚ್.ಎಂ. ವಿಜಯಲಕ್ಷ್ಮಿಯವರು ಮಾತನಾಡಿ, ಮಹಾರಾಣಿ ಕಾಲೇಜಿನಲ್ಲಿ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಪ್ರವೇಶಾತಿ ಮಿತಿಯಲ್ಲಿ ಸೀಟುಗಳನ್ನು ಹೆಚ್ಚಳ ಮಾಡಿರುವುದಕ್ಕೆ ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಳಪಟ್ಟ ಇತರೆ ಕಾಲೇಜಿನವರು ವ್ಯಾಪಕವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಒಂದೇ ಕಾಲೇಜಿಗೆ 400-500 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಳ ಮಾಡುವುದರಿಂದ, ಬೇರೆ ಕಾಲೇಜುಗಳಲ್ಲಿನ ಪ್ರವೇಶಾತಿ ಸಂಖ್ಯೆಯು ಕುಸಿಯುವ ಆತಂಕವನ್ನು ವ್ಯಕ್ತಪಡಿಸಿದ್ದಾರೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ 2024-25ನೇ ಸಾಲಿಗೆ ಬಿ.ಕಾಂ. ಕೋರ್ಸ್‌ನ ಪ್ರಥಮ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯಾಮಿತಿಯನ್ನು 690 ರಿಂದ 1100ಕ್ಕೆ ಹೆಚ್ಚಿಸಿ ಪ್ರವೇಶಾತಿ ಮಾಡಿಕೊಂಡಿರುವುದಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸಿರುವ ಸಂಯೋಜನಾ ಆದೇಶವನ್ನು ಶಿಕ್ಷಣ ಮಂಡಳ ಸಭೆಯು ಅನುಸಮರ್ಥಿಸಿತು. |

| | |
|---|---|
| II.4 | ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ಪ್ರಕರಣ 50(1)ರ ಪ್ರಕಾರ ಸಿದ್ಧಪಡಿಸಲಾಗಿರುವ ಮೈಸೂರು ವಿಶ್ವವಿದ್ಯಾನಿಲಯದ 2023-2024ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ತೀರ್ಮಾನಿಸಿತು.** |
| II.5 | 2020-21 ಮತ್ತು 2021-22ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| **ತೀರ್ಮಾನ** | **2020-21 ಮತ್ತು 2021-22ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಮತ್ತು ಸರ್ಕಾರಿ ಲೆಕ್ಕ ಪರಿಶೋಧಕರಿಗೆ ಕಳುಹಿಸಿ ಕೊಡಲು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು.** |
| II.6 | Constitutional Values ಅಡಿಯಲ್ಲಿ 'ಪರಿಸರ ಅಧ್ಯಯನ' ವಿಷಯದ ಪಠ್ಯಕ್ರಮವನ್ನು ಅಧಿಸೂಚಿಸಿರುವ ಬಗ್ಗೆ. |
| **ತೀರ್ಮಾನ** | **ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯ (ಸ್ನಾತಕ) ಶಿಫಾರಸ್ಸಿನನ್ವಯ 2024-25ನೇ ಶೈಕ್ಷಣಿಕ ಸಾಲಿಗೆ Constitutional Values ಅಡಿಯಲ್ಲಿ 'ಪರಿಸರ ಅಧ್ಯಯನ' ವಿಷಯದ ಪಠ್ಯಕ್ರಮವನ್ನು 02 ಕ್ರೆಡಿಟ್‌ಗಳಿಗೆ, ಪರೀಕ್ಷಾ ಮಾದರಿಯನ್ನು 50 ಅಂಕಗಳಿಗೆ ನಿಗದಿಗೊಳಿಸಿ ಅಧಿಸೂಚನೆ ಹೊರಡಿಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು.** |
| III.1 | ಕಲಾ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ |
| **ತೀರ್ಮಾನ** | **2024-25ನೇ ಶೈಕ್ಷಣಿಕ ಸಾಲಿನಲ್ಲಿ Universal Institute for Private Training, Kuwait ಸಂಸ್ಥೆಗೆ Specialized Programme ಅಡಿಯಲ್ಲಿ BA (English Literature & Digital Media Communication) ಮತ್ತು BA (Applied Psychology) ಕೋರ್ಸ್‌ಗಳಿಗೆ ಕಲಾ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಯನ ಮಂಡಳಿಯ ಶಿಫಾರಸ್ಸಿನನ್ವಯ ಸಿದ್ಧಪಡಿಸಲಾಗಿರುವ ಪ್ರಥಮ ವರ್ಷದ ಪಠ್ಯಕ್ರಮ ಮತ್ತು ಪರೀಕ್ಷಾ ವಿಧಾನಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III.2 | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |

| ಕ್ರ. ಸಂ. | ಸಂಸ್ಥೆಯ ಹೆಸರು | ಕೋರ್ಸುಗಳ ವಿವರ |
|---|---|---|
| **1** | **Universal Institute for Private Training, Kuwait** | **BCA (Artificial Intelligence & Data Science)** |

| | | |
|---|---|---|
| 2 | **Central Institute of Petrochemicals Engineering and Technology (CIPET), Mysuru** | **M.Sc. (Polymer Science)** |
| 3 | **International Institute for Assisted Reproductive Technology and Research Centre, Mysuru** | **M.Sc. (Assisted Reproduction and Embryology)** |
| 4 | **International Academy of Reproductive Sciences, Nadanahalli, Mysuru** | **M.Sc. (Clinical Embryology and Assisted Reproductive Techniques)** |

| | |
|---|---|
| ತೀರ್ಮಾನ | 2024–25ನೇ ಶೈಕ್ಷಣಿಕ ಸಾಲಿನಲ್ಲಿ **Specialized Programme** ಅಡಿಯಲ್ಲಿ ಅಧ್ಯಯನ ಮಂಡಳಿಯ ಶಿಫಾರಸ್ಸಿನನ್ವಯ ಸಿದ್ಧಪಡಿಸಿರುವ ಈ ಮೇಲ್ಕಂಡ ಸಂಸ್ಥೆಗಳ ಕೋರ್ಸುಗಳಲ್ಲಿನ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು ಪರೀಕ್ಷಾ ವಿಧಾನಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.3 | ವಾಣಿಜ್ಯ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | 2024–25ನೇ ಶೈಕ್ಷಣಿಕ ಸಾಲಿನಲ್ಲಿ **GETS Academy,** ಹೂಟಗಳ್ಳಿ ಕೈಗಾರಿಕಾ ವಲಯ, ಬೆಳವಾಡಿ, ಮೈಸೂರು ಸಂಸ್ಥೆಗೆ **Specialized Programme** ಅಡಿಯಲ್ಲಿ **1. B.Com.-Hons. (E-commerce & Digital Marketing), 2. B.com.-Hons. (Finance & Investment)** ಮತ್ತು **3. B.com-Hons. (International Accounting & Finance)** ಕೋರ್ಸ್‌ಗಳಿಗೆ ವಾಣಿಜ್ಯ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಯನ ಮಂಡಳಿಯ ಶಿಫಾರಸ್ಸಿನನ್ವಯ ಸಿದ್ಧಪಡಿಸಲಾಗಿರುವ 5 ಮತ್ತು 6ನೇ ಸೆಮಿಸ್ಟರ್ ಪರಿಷ್ಕೃತ ಪಠ್ಯಕ್ರಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.4 | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | 2024–25ನೇ ಶೈಕ್ಷಣಿಕ ಸಾಲಿನಲ್ಲಿ ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಕೆ.ಬಿ.ಎಲ್. ಲೇಔಟ್, ಮೈಸೂರು ಸಂಸ್ಥೆಗೆ **Specialized Programme** ಅಡಿಯಲ್ಲಿ **PG Diploma in Coding & Transcription & PG Diploma in Health Insurance & Records** ಕೋರ್ಸ್‌ಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಯನ ಮಂಡಳಿಯ ಶಿಫಾರಸ್ಸಿನನ್ವಯ ಸಿದ್ಧಪಡಿಸಿರುವ ಪಠ್ಯಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| III.5 | ವಾಣಿಜ್ಯ ನಿಕಾಯದಡಿಯಲ್ಲಿನ Specialized ಕೋರ್ಸ್‌ಗಳ ಅಧ್ಯಯನ ಮಂಡಳಿಯ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | **2024-25ನೇ ಶೈಕ್ಷಣಿಕ ಸಾಲಿನಲ್ಲಿ ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ:, ಮಂಡ್ಯ ಜಿಲ್ಲೆ, ಸಂಸ್ಥೆಯಲ್ಲಿನ B.Des. (Fashion Design & Management) ಮತ್ತು B.Des. (Interior Design & Management) ಕೋರ್ಸ್‌ಗಳ ಪ್ರಥಮ ವರ್ಷದ ಪಠ್ಯಕ್ರಮಗಳು ಮತ್ತು ರೆಗ್ಯುಲೇಷನ್ಸ್‌ಗಳನ್ನು ಹಾಗೂ ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಕೆ.ಬಿ.ಎಲ್. ಲೇಔಟ್, ಮೈಸೂರು ಸಂಸ್ಥೆಯಲ್ಲಿನ Bachelor of Hospital Management ಕೋರ್ಸ್‌ನ ರೆಗ್ಯುಲೇಷನ್ಸ್, ಪಠ್ಯಕ್ರಮ ಮತ್ತು Scheme of Examinationಗಳನ್ನು ವಾಣಿಜ್ಯ ನಿಕಾಯ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಯನ ಮಂಡಳಿಯ ಶಿಫಾರಸ್ಸಿನನ್ವಯ ಸಿದ್ಧಪಡಿಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

**ಇತರೆ ವಿಷಯಗಳು:**

1. ಮಾನ್ಯ ಕುಲಪತಿಗಳು ಮಾತನಾಡಿ, ಸ್ನಾತಕೋತ್ತರ (ಪಿಜಿ) ಪ್ರವೇಶಾತಿ ಪ್ರಾರಂಭವಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಸಿದ್ಧಪಡಿಸಿರುವ ಶೈಕ್ಷಣಿಕ ವೇಳಾಪಟ್ಟಿ (Calendar of Events) ಪ್ರಕಾರವೇ ಎಲ್ಲಾ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಸೆಮಿಸ್ಟರ್ ಪರೀಕ್ಷೆಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು.

2. ಡಾ. ಆಂಥೋನಿ ಪಾಲ್ ರಾಜ್ ಸಿ. ಅವರು ಮಾತನಾಡಿ ಎನ್‌ಸಿಟಿಇ ಸಮಸ್ಯೆ ಬಗ್ಗೆ ಅಸೋಸಿಯೇಷನ್‌ನಿಂದ ತಮಗೆ ಈಗಾಗಲೇ ಪತ್ರವನ್ನು ನೀಡಲಾಗಿದೆ. 2021-2022 ಹಾಗೂ 2022-23ವರೆಗೆ ಅಧ್ಯಾಪಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ಅನುಮೋದನೆ ದೊರೆತಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕುಲಸಚಿವರೊಂದಿಗೆ ಮಾತನಾಡಲಾಗಿದೆ. ಕುಲಸಚಿವರು ನೇಮಕಾತಿಯ ಆದೇಶ ಹಾಗೂ ಅವರುಗಳಿಗೆ ನೀಡುತ್ತಿರುವ ವೇತನದ ಬಗೆಗಿನ ವಿವರವನ್ನು ನೀಡಿ ಎಂದು ತಿಳಿಸಿದ್ದರು. ಆದರೆ ವೇತನಕ್ಕೆ ಸಂಬಂಧಿಸಿದ ವಿವರವನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

   ಕುಲಸಚಿವರು ಮಾತನಾಡಿ, 2021-22ನೇ ಸಾಲಿನಲ್ಲಿ ನಾನು ಕುಲಸಚಿವರಾಗಿ ವಿಶ್ವವಿದ್ಯಾನಿಲಯದಲ್ಲಿ ಇರಲಿಲ್ಲ. ಆದಕಾರಣ ನೀವು ಅಧ್ಯಾಪಕರುಗಳ ನೇಮಕಾತಿ ಆದೇಶ ಹಾಗೂ ವೇತನಕ್ಕೆ ಸಂಬಂಧಿಸಿದ ದಾಖಲೆಗಳ ಸಂಪೂರ್ಣ ಮಾಹಿತಿಯನ್ನು ದೃಢೀಕರಿಸಿ ಸಲ್ಲಿಸಿದ್ದಲ್ಲಿ ದಾಖಲೆಗಳನ್ನು ಪರಿಶೀಲಿಸಿ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ನೀಡಲಾಗುವುದು ಎಂದು ತಿಳಿಸಿದರು.

   ಮಾನ್ಯ ಕುಲಪತಿಗಳು ಮಾತನಾಡಿ, ಎಲ್ಲಾ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡುವಂತೆ ಡಾ. ಆಂತೋನಿ ಪಾಲ್ ರಾಜ್ ಸಿ. ಅವರಿಗೆ ಸೂಚಿಸಿ, ದಾಖಲೆಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಲಾಗುವುದು ಎಂದು ತಿಳಿಸಿದರು.

3. ಡಾ. ಆಂಥೋಣಿ ಪಾಲ್ ರಾಜ್ ಸಿ. ರವರು ಮಾತನಾಡಿ, ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳ (BOE) ರಚನೆಯಾಗಿದೆ. ಕಳೆದ ವರ್ಷದಲ್ಲಿ ಪರೀಕ್ಷಾ ಮೌಲ್ಯಮಾಪನ ಸದಸ್ಯರುಗಳ ಸಂಖ್ಯೆ 9+1 ಇತ್ತು, ಪ್ರಸ್ತುತ ಪರೀಕ್ಷಾ ಮಂಡಳಿಯ ಸದಸ್ಯರುಗಳ ಸಂಖ್ಯೆ 5+1ಗೆ ಇಳಿಸಲಾಗಿದೆ. ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯ ಅರಿವು ನಮಗಿರುವುದರಿಂದ ಜೊತೆಗೆ ಪರೀಕ್ಷಾ ಮೌಲ್ಯಮಾಪನ ಕೆಲಸ ಮಾಡಿಸಲು ಕಷ್ಟಕರವಾಗುವುದರಿಂದ, ಪರೀಕ್ಷಾ ಮಂಡಳಿಯ ಸದಸ್ಯರುಗಳನ್ನು 6+1 ರಂತೆ ಮಾಡಿಕೊಡುವಂತೆ ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಶಿಕ್ಷಣ ವಿಷಯಕ್ಕೆ ಸಂಬಂಧಿಸಿದ BOE ನಲ್ಲಿ ತಿದ್ದುಪಡಿಗಳೇನಾದರು ಆಗಬೇಕಾದಲ್ಲಿ ಕುಲಸಚಿವ (ಪರೀಕ್ಷಾಂಗ)ರವರಿಗೆ ಮನವಿಯನ್ನು ಸಲ್ಲಿಸುವಂತೆ ಸೂಚಿಸಿದರು. ಮನವಿಯನ್ನು ಪರಿಸೀಲಿಸಿ, ಅಗತ್ಯವಿದ್ದಲ್ಲಿ ಬದಲಾವಣೆ ಮಾಡುವುದಾಗಿ ತಿಳಿಸಿದರು.

Dr. Mujeeda Banu requested the university for approval of the admission of 2nd and 3rd year student so that the student can map the subject and pay the examination fees as early as possible . In case if the student not able to pay the exam fees by 31st Oct 2024 the date may be little extended.

ಮಾನ್ಯ ಕುಲಪತಿಗಳು ಮಾತನಾಡಿ, ನಿಮ್ಮ ಕಾಲೇಜಿನಲ್ಲಿ ಮೊದಲೇ ಇರುವಂತಹ ವಿದ್ಯಾರ್ಥಿಗಳು, ಜೊತೆಗೆ ಅವರ ವಿವರಗಳೆಲ್ಲವೂ UUCMSನಲ್ಲಿ ಇರುವುದರಿಂದ ಸಬ್ಜೆಕ್ಟ್ ಮ್ಯಾಪಿಂಗ್ ಮಾಡಲು ಹೇಗೆ ಕಷ್ಟವಾಗುತ್ತದೆ. ಅವರುಗಳ ಪ್ರವೇಶಾತಿಯನ್ನು ನೀಡಿರುವುದು UUCMSನಲ್ಲಿ. ಆದ್ದರಿಂದ ಮ್ಯಾಪಿಂಗ್‌ಗೆ ಕಷ್ಟವಾಗುವುದಿಲ್ಲ. ಆದರೆ ಕ್ಯಾಲೆಂಡರ್ ಆಫ್ ಈವೆಂಟ್ಸ್‌ಗೆ ಅನುಗುಣವಾಗಿ ಪರೀಕ್ಷೆ ನಡೆಸಬೇಕಾಗುತ್ತದೆ. ಒಂದೆರಡು ದಿನಗಳ ವಿಸ್ತರಣೆ ಬೇಕಾದಲ್ಲಿ ಮನವಿಯನ್ನು ಸಲ್ಲಿಸಿದರೆ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಪ್ರೊ. ಮಹಾದೇವಪ್ಪ ಬಿ.ರವರು ಮಾತನಾಡಿ, ಯಾವ ವಿಷಯಗಳಿಗೆ ಮ್ಯಾಪಿಂಗ್ ಆಗಿರುವುದಿಲ್ಲವೆಂದು ಕೇಳಿದರು.

ಡಾ. ಮುಜೀದಾ ಬಾನು ಅವರು ಬಿ.ಕಾಂ., ಬಿಬಿಎಂ., ಹಾಗೂ ಬಿಸಿಎ., ವಿಷಯಗಳಿಗೆ ಮ್ಯಾಪಿಂಗ್ ಆಗಿರುವುದಿಲ್ಲವೆಂದು ಹಾಗೂ ಪ್ರವೇಶಾತಿಯ ಅನುಮೋದನೆಯು ದೊರಕಿರುವುದಿಲ್ಲವೆಂದು ತಿಳಿಸಿದರು.

ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಇನ್ನು ಎರಡು-ಮೂರು ದಿನಗಳಲ್ಲಿ ಪ್ರವೇಶಾತಿಗೆ ಅನುಮೋದನೆ ನೀಡಲಾಗುವುದೆಂದು ತಿಳಿಸಿದರು.

ಅಂತಿಮವಾಗಿ, ಮಾನ್ಯ ಕುಲಸಚಿವರು ಸಭೆಯಲ್ಲಿ ಸೂಕ್ತ ಸಲಹೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಗೌರವಾನ್ವಿತ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಹಾಗೂ ಅಧ್ಯಕ್ಷರು**